2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 26199 ಃ 2019

| | | | |
|---|---|---|---|
| ಸಾಕ್ಷಿದಾರನ ಹೆಸರು | ನಾಗೇಶ | ಸಿ ಡಬ್ಲ್ಯು | 11 |
| ತಂದೆಯ ಹೆಸರು | ವೆಂಕಟಯ್ಯ | ಪಿ ಡಬ್ಲ್ಯು | 2 |
| ವಯಸ್ಸು | 51 ವರ್ಷ | | |
| ಉದ್ಯೋಗ | ಪಿ.ಐ, ತಲಗಟ್ಟಪುರ ಸಂಚಾರಿ ಪಿ.ಎಸ್ | | |
| ವಾಸಸ್ಥಾನ | ಕೆ.ಎಸ್ ಲೇಔಟ್, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 27.10.2025.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನಾನು ದಿಃ22.02.2018 ರಿಂದ ದಿಃ26.09.2018 ರವರೆಗೆ ಜಯನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 19.06.2018 ರಂದು ಸಂಜೆ 5.00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದಾಗ ಪಿರ್ಯಾದುದಾರರು ಮೊ.ಸಂಖ್ಯೆ 231/2018 ರಲ್ಲಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ದೂರನ್ನು ನಿಪಿ-3 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3ಎ ಎಂದು ಗುರ್ತಿಸಿದ್ದೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-4 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4ಎ ಎಂದು ಗುರ್ತಿಸಿದ್ದೇನೆ. ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯ ಚಾಸಾ 8 ರಿಂದ 10 ರವರನ್ನು ನೇಮಿಸಿರುತ್ತೇನೆ. ದಿಃ24.06.2018 ರಂದು ಚಾಸಾ 8 ರಿಂದ 10 ರವರು ಸಂಜೆ 4.30 ಗಂಟೆಗೆ 1 ಮತ್ತು 2ನೇ ಆರೋಪಿತರನ್ನು ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಸಾಕ್ಷಿ ವರದಿ ನೋಡಿ ಗುರುತಿಸಿದ್ದು ನಿಪಿ 5 ಹಾಗೂ ಸಹಿಯನ್ನು ನಿಪಿ 5ಎ ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಬಳಸಿದ ಒಂದು ಎಲಿವೇಟರ್ ದ್ವಿಚಕ್ರ ವಾಹನ ಕರೆತಂದು ಹಾಜರುಪಡಿಸಿದ್ದು ಅವರನ್ನು ವಿಚಾರಣೆ ಮಾಡಿ ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ ಹಾಗೂ ಪಂಚರ ಸಮಕ್ಷಮ ಸದರಿ ಬೈಕ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5, ಸಾಕ್ಷಿಯ ಸಹಿಯನ್ನು ನಿಪಿ 5ಎ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಜರುಗಿಸಿರುತ್ತೇನೆ. ಆರೋಪಿಗಳು ಕೃತ್ಯಕ್ಕೆ ಬಳಸಿದ ಎರಡು ನಂಬರ್ ಪ್ಲೇಟ್ ಇಲ್ಲದ ಒಂದು

ಎಲಿವೇಟರ್ ಅನ್ನು ಕೆಎ 05 ಕೆಎ 5571, ಎರಡು ಹಸಿರು ಬಣ್ಣದ ಜಾಕೆಟ್, ಎರಡು ಜೊತೆ ಶೂ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಂಚನಾಮೆಯನ್ನು ನಿಪಿ 6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 6ಎ ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಫೊಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಆರೋಪಿಗಳ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ 4, 5, 9 ಮತ್ತು 10 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಆರೋಪಿಗಳು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಜೂನ್ 2ನೇ ವಾರದಲ್ಲಿ ಈ ಕೇಸಿಗೆ ಸಂಬಂಧಪಟ್ಟಂತೆ ಸಂಜೆ ಸುಮಾರು 7.00 ಗಂಟೆ ಸಮಯದಲ್ಲಿ ಅಶೋಕ ಪಿಲ್ಲರ್ ಹೊಂಡಾ ಎಲಿವೇಟರ್ ಗಾಡಿಯಲ್ಲಿ ಜಯನಗರ ಅಶೋಕ ಪಿಲ್ಲರ್ ಕಡೆಗೆ ಬಂದು ಒಂದು ರಸ್ತೆಯಲ್ಲಿ ವಯಸ್ಸಾದ ಚಾಸಾ 1 ಮಗುವನ್ನು ಆಟವಾಡಿಸುತ್ತಿರುವುದು ಕಂಡು ಬಂದಿದ್ದು ನವೀನ್ ಎಂಬ ಆರೋಪಿಯು ಅವರ ಹಿಂಬದಿಯಿಂದ ಹೋಗಿ ಅವರ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡಿದ್ದು ಸಾಕ್ಷಿಯು ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು. 25.06.2018 ರಂದು ಆರೋಪಿತರನ್ನು ಪೊಲೀಸ್ ಕಸ್ಟಡಿಗ ಪಡೆದುಕೊಂಡು ವಿಚಾರಿಸಲಾಗಿ 1ನೇ ಆರೋಪಿಯು ಸರಗಳ್ಳತನ ಮಾಡಿ 2ನೇ ಆರೋಪಿಯ ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ದಿಃ 28.06.2018 ರಂದು ಆರೋಪಿತರನ್ನು ಕರೆದುಕೊಂಡು ಹೋಗಿ ಪಂಚರಾದ ಚಾಸಾ 5 ಮತ್ತು 6 ರವರನ್ನು ಕರೆದುಕೊಂಡು ಹೋಗಿ ಸ್ಥಳದ ಪಂಚನಾಮೆಯನ್ನು 12.00 ರಿಂದ 12.20 ಗಂಟೆಯವರೆಗೆ ಜರುಗಿಸಿರುತ್ತೇನೆ. ಪಂಚನಾಮೆಯನ್ನು ನಿಪಿ 10 ಸಾಕ್ಷಿಯ ಸಹಿಯನ್ನು ನಿಪಿ 10ಎ ಎಂದು ಗುರುತಿಸಲಾಗಿರುತ್ತದೆ. 03.07.2018 ರಂದು ಪಂಚರಾದ ಚಾಸಾ 6 ಮತ್ತು 7 ರವರನ್ನು ಠಾಣೆಗೆ ಕರೆಸಿಕೊಂಡು 2ನೇ ಆರೋಪಿ ತೋರಿಸಿದ ಸದರಿ ಮನೆಗೆ ಹೋಗಿ 2ನೇ ಆರೋಪಿ ಹಾಜರುಪಡಿಸಿದ 28 ಗ್ರಾಂ ಚಿನ್ನದ ಚೈನ್ ಅನ್ನು ಮಹಜರ್ ಮೂಲಕ ವಶಕ್ಕೆ ಪಡೆದುಕೊಂಡಿದ್ದು, ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ 11 ಸಾಕ್ಷಿಯ ಸಹಿಯನ್ನು ನಿಪಿ 11ಎ ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಎರಡು ಫೊಟೋಗಳನ್ನು ನೋಡಿ ಗುರುತಿಸಿದ್ದು ನಿಪಿ 12 ಎಂದು ಗುರುತಿಸಲಾಯಿತು. ಚಾಸಾ 6 ಮತ್ತು 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 05.07.2018 ರಂದು ಚಾಸಾ 1 ರವರು ಆರೋಪಿ ಮತ್ತು ಮಾಲನ್ನು

ಗುರುತಿಸಿದ ಬಗ್ಗೆ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 25.07.2018 ರಂದು ನ್ಯಾಯಾಲಯದ ಅನುಮತಿ ಮೇರೆಗೆ ಚಾಸಾ 14 ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಟ್ಟಿರುತ್ತೇನೆ. ಆರೋಪಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎ.ಎನ್ ವಕೀಲರಿಂದಃ

ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ದಿಃ19.06.2018 ರಂದು ನೀಡಿದ್ದು ಆದರೆ ನಾನು ಪಿರ್ಯಾದಿಯಲ್ಲಿ ದಿಃ 18.06.2018 ಎಂದು ಸಹಿ ಮಾಡಿದ್ದೇನೆ ಎಂದರೆ ಸರಿ ಸಾಕ್ಷಿಯು ತಪ್ಪಿನಿಂದ ದಿಃ 18.06.2018 ಎಂದು ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಪ್ರ ವ ವರದಿಯನ್ನು 19.06.2018 ಎಂದು ನಮೂದಾಗಿರುತ್ತದೆ. ನಾನು ಯಾವುದೇ ಎಲಿವೇಟರ್ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಹಳೆಯ ಪ್ರಕರಣಗಳನ್ನು ಮುಚ್ಚಿ ಹಾಕಲು ನಾನು ಸುಳ್ಳು ಪ್ರರಕಣವನ್ನು ಆರೋಪಿ ವಿರುದ್ದ ನೊಂದಣಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎಲಿವೇಟರ್ ವಾಹನದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಎಲಿವೇಟರ್ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)

2ನೇ ಅ ಮು ಮ ದಂ.